# ನಿಮ್ಮ ಪ್ರಶ್ನೆಗೆ ಇಂಟರ್‌ನೆಟ್ ಶೋಧಯಂತ್ರಗಳ ಸ್ವಯಂಚಾಲಿತ ಉತ್ತರ *

## ಎಂ. ಎಸ್. ಶ್ರೀಧರ್

**ಸಾರಾಂಶ:** ಕಾವೇರಿ ನದಿಯ ಉದ್ದ, ಕನ್ನಂಬಾಡಿಯ ಎತ್ತರ, ಕುವೆಂಪು ಯಾರು, ಇತ್ಯಾದಿ ಪ್ರಶ್ನೆಗಳಿಗೆ ಇಂಟರ್‌ನೆಟ್‌ನಲ್ಲಿ ಸ್ವಯಂಚಾಲಿತ ಉತ್ತರ ನೀಡುವ ಸೇವೆ answers.com, askjeeves.com ನಂತಹ ತಾಣಗಳಲ್ಲಿ ಲಭ್ಯವಿದೆ. ಇವು ಹಿಂದೆಯೇ ಕ್ರೋಡೀಕರಿಸಿದ ಹಲವಾರು ಮಾಹಿತಿಗಳನ್ನಿಟ್ಟುಕೊಂಡು, ನಮ್ಮ ಪ್ರಶ್ನೆಯಲ್ಲಿನ ಪದಗಳಿಗೆ ಹೋಲಿಸಿ, ಹೊಂದಿಸಿ ಉತ್ತರಗಳನ್ನು ನೀಡುತ್ತವೆ. ಕೆಲವೊಮ್ಮೆ ಯಂತ್ರದ ಸೀಮಿತ ಬುಧ್ಧಿವಂತಿಕೆಯಿಂದಾಗಿ ತಪ್ಪು ಹೊಂದಿಕೆಯಾಗಿ ಪ್ರಮಾದಕರ ಉತ್ತರಗಳು ದೊರಕುವುದೂ ಉಂಟು. ಆದರೆ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಆ ತಾಣಗಳಲ್ಲಿ ಮಾಹಿತಿ ಸಿಗದಿದ್ದಾಗ, ಕೆಲವು ದಿನಗಳ ನಂತರ ಪ್ರಯತ್ನಿಸಿದರೆ (ನಿರಂತರವಾಗಿ ಮಾಹಿತಿ ಸೇರ್ಪಡೆ ಹಾಗೂ ಪರಿಷ್ಕರಣೆ ನಡೆಯುವುದರಿಂದ) ಸಿಗುವ ಸಾದ್ಯತೆ ಇದೆ. ಯಾಂತ್ರಿಕ ಬುಧ್ಧಿವಂತಿಕೆಯು ಎಲ್ಲ ಪ್ರಶ್ನೆಗಳನ್ನೂ ಉತ್ತರಿಸದಿದ್ದರೂ ಕೆಲವು ಮೂಲಭೂತ ಪ್ರಶ್ನೆಗಳಿಗೆ ಉತ್ತರಿಸುವುದರೊಂದಿಗೆ ಸಂಬಂಧಪಟ್ಟ ತಾಣಗಳನ್ನು ಪಟ್ಟಿ ಮಾಡುತ್ತದೆ. ಕನ್ನಡ ಹಾಗೂ ಕರ್ನಾಟಕದ ಬಗ್ಗೆ ಇಂತಹ ಮಾಹಿತಿಯನ್ನು ಪಡೆಯಲು ಮೊದಲಿಗೆ ಅಂತರ್ಜಾಲದಲ್ಲಿ ಈ ಎಲ್ಲ ಮಾಹಿತಿಯನ್ನೂ ನಾವು ತುಂಬಬೇಕಾದ್ದು ಅವಶ್ಯಕ. ಮುಖ್ಯ ಗ್ರಂಥಗಳನ್ನು ಕಾಪಿರೈಟ್ ಮುಕ್ತಗೊಳಿಸಿ, ಪ್ರಕಾಶಕರ ಕಪಿಮುಷ್ಠಿಯಿಂದ ಪಾರು ಮಾಡಿ ಮುಕ್ತ ಡಿಜಿಟಲ್ ಪತ್ರಾಗಾರದೆಡೆಗೆ ಸೇರಿಸುವಂತಾಗುವುದು ಸೂಕ್ತ.

**ಸೂಚಿ ಪದಗಳು:** ಸ್ವಯಂಚಾಲಿತ ಉತ್ತರ; ಇಂಟರ್‌ನೆಟ್; ಕನ್ನಡ; ಪರಾಮರ್ಶನ ಸೇವೆ

ಕಾವೇರಿ ನದಿಯ ಉದ್ದ ಎಷ್ಟು, ಕನ್ನಂಬಾಡಿ ಕಟ್ಟೆಯ ಎತ್ತರ ಎಷ್ಟು, ಕುವೆಂಪು ಯಾರು, ಹಂಪೆ ಎಲ್ಲಿದೆ, ಇತ್ಯಾದಿ ಪ್ರಶ್ನೆಗಳನ್ನು ನಿಮ್ಮ ಕಂಪ್ಯೂಟರ್‌ನಲ್ಲಿ ಅಚ್ಚೊತ್ತಿದಾಕ್ಷಣ ತಟ್ಟನೆ ಸ್ವಯಂಚಾಲಿತ ಇಂಟ್‌ರ್‌ನೆಟ್ ಶೋಧ ಯಂತ್ರವೊಂದು ಉತ್ತರಿಸುವುದಾದರೆ ಹೇಗೆ? ಇದು ಸಾಧ್ಯ, ಆಶ್ಚರ್ಯ ಪಡಬೇಕಾಗಿಲ್ಲ. ಇದೇನು ರಸ್ತೆ ಬದಿಯ ಭವಿಷ್ಯ ಹೇಳುವ ಯಂತ್ರದಂತಲ್ಲ. ಇಂತಹ ಸಾವಿರಾರು ಪ್ರಶ್ನೆಗಳಿಗೆ ತತ್‌ಕ್ಷಣ ಉತ್ತರಿಸುವ ಹತ್ತಾರು ಸ್ವಯಂಚಾಲಿತ ಶೋಧ ಯಂತ್ರಗಳು ಇಂಟರ್‌ನೆಟ್‌ನಲ್ಲಿವೆ. ಅವು ತಮ್ಮ ಚತುರತೆಯಿಂದ online ಪಠ್ಯ ಸಂಗ್ರಹಣೆಯಲ್ಲಿರುವ ಮತ್ತು/ಅಥವ ಇತರ ತಾಣಗಳಲ್ಲಿರುವ ಸಂಗತಿ ಮತ್ತು ಮಾಹಿತಿಯನ್ನು ಬಳಸಿ ಸ್ವಯಂ ಚಾಲಿತ ವ್ಯವಸ್ಥೆಯಿಂದ (ಗ್ರಾಹಕರ ಪ್ರಶ್ನೆಗಳಿಗೆ ತಾಳೆ ಹಾಕಿ) ಕೂಡಲೇ ಉತ್ತರವನ್ನು ಕೊಡುತ್ತವೆ. ಇಂತಹ ಸೇವೆಯಲ್ಲಿ ಬಹಳ ಜನಪ್ರಿಯವಾಗಿ ಮುಂಚೂಣಿಯಲ್ಲಿರುವುದು ಗುರುನೆಟ್ ಅವರ answers.com. ಇದು ಹತ್ತು ಲಕ್ಷಕ್ಕೂ ಹೆಚ್ಚು ವೆಬ್ ಪುಟಗಳಷ್ಟು ಮಾಹಿತಿ ಹಿಡಿದಿಟ್ಟಿದ್ದು, ಗೂಗಲ್, A9, ಸರ್ಚ್ ರೋವರ್ ಇತ್ಯಾದಿ ಶೋಧ ಯಂತ್ರಗಳ ಸಹಕಾರದೊಂದಿಗೆ ನಂಬಲರ್ಹವಾದ, ನಿಖರವಾದ ಮತ್ತು ಸಂಕ್ಷಿಪ್ತ ಮಾಹಿತಿಯನ್ನು 150 ಕ್ಕೂ ಹೆಚ್ಚು ಆನ್‌ಲೈನ್ ಪರಾಮರ್ಶನ ಗ್ರಂಥಗಳಿಂದ ಪಡೆದು ಪ್ರಶ್ನೆಗಳಿಗೆ ಕ್ಷಣಾರ್ಧದಲ್ಲಿ ಉತ್ತರವನ್ನು ಕೊಡುತ್ತದೆ. ಈ ಸೇವೆ ಪ್ರಸ್ತುತಿಗೆ ವಿಕಿಪೀಡಿಯ (ಮುಕ್ತ ವಿಶ್ವಕೋಶ) ದಂತಹ ವಿಶ್ವಕೋಶ, wordnet ನಂತಹ ನಿಘಂಟು (ಪ್ರಿನ್ಸ್‌ಟನ್ ವಿಶ್ವವಿದ್ಯಾಲಯದ ಬೃಹತ್ ಆನ್‌ಲೈನ್ ನಿಘಂಟು) ಅಲ್ಲದೆ, ಪುಸ್ತಕ ಪರಿಚಯ, ಚರಿತ್ರೆ, ಇತ್ಯಾದಿ online ಮಾಹಿತಿ ಮೂಲಗಳನ್ನು ಬಳಸಿ ಅವುಗಳ ವಿವರ ಮತ್ತು ಸಂಪರ್ಕ ಒದಗಿಸುತ್ತದೆ. ಇಷ್ಟೇ ಅಲ್ಲದೆ ಪುಕ್ಕಟೆಯಾಗಿ '1-click answers' ತಂತ್ರಾಂಶವನ್ನು ನೀಡಿ ನಾವು ಕಂಪ್ಯೂಟರ್‌ನಲ್ಲಿ ಏನೇ ಕೆಲಸ ಮಾಡುವಾಗಲೂ ಯಾವ ಅಡಚಣೆಯೂ ಆಗದಂತೆ ಒಂದು ಪದ ಅಥವ ಪದಗುಚ್ಛದ ಮೇಲೆ Alt ಕೀಲಿ ಒತ್ತಿಹಿಡಿದು ಕ್ಲಿಕ್ ಮಾಡಿ ಆ ಪದ/ ವಿಷಯಕ್ಕೆ ಸಂಬಂಧಿಸಿದ ವಿವರ/ಮಾಹಿತಿಯನ್ನು ಪಡೆಯಬಹುದು. ಈ ರೀತಿ ನಮ್ಮ desktop ಮೇಲೆ ನಡೆಸುವ ಕೆಲಸಗಳನ್ನು ಮಾಹಿತಿ ಶೋಧಕ್ಕೆ ಸಂಘಟಿಸಿದ್ದರಿಂದ ಶೋಧಯಂತ್ರಗಳು ನಮ್ಮ ಮುಂದೆ ತಂದು ನಿಲ್ಲಿಸುವ ನೂರಾರು ಅನವಶ್ಯಕ ತಾಣಗಳನ್ನು ಪರಿಶೀಲಿಸುವ ಶ್ರಮ ಹಾಗೂ ಕಾಲವನ್ನು ಈ ಸೇವೆ ಉಳಿಸುತ್ತದೆ. ಮೇಲಾಗಿ ನಾವು ಕಂಪ್ಯೂಟರ್‌ನಲ್ಲಿ ಏನೇ ಕೆಲಸ ಮಾಡುವಾಗಲೂ ಒಂದು ಪದದ ಅರ್ಥ ತಿಳಿಯಬೇಕಿದ್ದರೆ ಬೇರೆ ತಾಣಗಳಿಗೆ ಭೇಟಿಯಾಗಲಿ ಅಥವಾ ಶಬ್ಧಕೋಶ, ನಿಘಂಟುಗಳ ಸಿ ಡಿ ಯನ್ನು drive ನಲ್ಲಿ ಇಟ್ಟು ಹುಡುಕುವುದಾಗಲಿ ಬೇಕಿಲ್ಲ. ನೀವು ಈ ಉಚಿತ ತಂತ್ರಾಂಶವನ್ನು ನಿಮ್ಮ ಕಂಪ್ಯೂಟರ್‌ನಲ್ಲಿ ಅಳವಡಿಸಿದ್ದೇ ಆದರೆ ಪ್ರತೀ ಬಾರಿ ಕಂಪ್ಯೂಟರ್ ಚಾಲೂ ಮಾಡಿದಾಕ್ಷಣ answers.com ಚಾಲೂ ಆಗುವುದಲ್ಲದೆ ಒಂದೇ ಪುಟದಲ್ಲಿ ಸಂಕ್ಷಿಪ್ತ ತಾಜಾ ಸುದ್ದಿ, ಚಿತ್ರ, ಉಲ್ಲೇಖ (guide), ಹೊಸಪದ, ಜನಪ್ರಿಯ ವ್ಯಕ್ತಿಗಳ ಜನ್ಮದಿನ, ಇಂದಿಗೆ ಸಂಬಂಧಿಸಿದ ಚರಿತ್ರೆ, ಅತ್ಯಂತ ಜನಪ್ರಿಯ ವೆಬ್‌ತಾಣಗಳು, ಭಾಷಾಂತರಗಳು, ಭೂಗೋಳ, ಹವಾಮಾನ, ತಂತ್ರಜ್ಞಾನ, ಇತ್ಯಾದಿ ನಮ್ಮ ಮುಂದೆ ನಿಲ್ಲುತ್ತದೆ ಮತ್ತು ಅವುಗಳ ಪೂರ್ಣ ವಿವರ/ಮಾಹಿತಿ ಇರುವ ತಾಣಗಳಿಗೆ ಸಂಪರ್ಕವನ್ನೂ ಕಲ್ಪಿಸುತ್ತದೆ.

ಕೆಲವು ಶೋಧ ಯಂತ್ರಗಳು ಈ ಹಿಂದೆಯೇ ಕ್ರೂಡೀಕರಿಸಿದ quiz ಮಾದರಿಯ ಪ್ರಶ್ನೋತ್ತರಗಳ archive ಮತ್ತು online ವಿಶ್ವಕೋಶಗಳನ್ನು ಬಳಸಿ ಒಂದು ಅಂದಾಜಿನ ಮೇಲೆ ಪ್ರಶ್ನೆಯಲ್ಲಿರುವ ಪದಗಳನ್ನು ತಾಳೆ ಹಾಕಿ ಉತ್ತರ ರವಾನಿಸುತ್ತವೆ. answers.com ಸೇರಿದಂತೆ ಹಲವಾರು ಯಂತ್ರಗಳ ಸೇವೆ ಪುಕ್ಕಟೆಯಾದರೂ ಗೂಗಲ್ (http://answers.google.com) ಪ್ರಶ್ನೆಯೊಂದಕ್ಕೆ ತನ್ನ ಸೇವೆಗೆ $ 2.50 ಶುಲ್ಕ ವಿಧಿಸುತ್ತದೆ ಹಾಗೂ ತನ್ನ ಮಾಹಿತಿ ಸೇವೆಯನ್ನು ಆಯ್ದ 500 ಸಂಶೋಧಕರನ್ನು ಬಳಸಿ ದೊರಕಿಸಿಕೊಡುತ್ತದೆ. ಇಲ್ಲಿ ಇತ್ತೀಚೆಗೆ ಮೈಕ್ರೋಸಾಫ್ಟ್ ಅಧಿಕಾರಿಯೊಬ್ಬರು MSN ಶೋಧಯಂತ್ರದ Encarta (http://www.msn.com) ಪ್ರಶ್ನೋತ್ತರ ಪುಕ್ಕಟೆ ಸೇವೆಯ ಬಗ್ಗೆ ಪತ್ರಿಕಾ ಹೇಳಿಕೆ /ಪ್ರಚಾರ ನೀಡಿದ್ದನ್ನು ಸ್ಮರಿಸಬಹುದು. ಇಲ್ಲಿಯೂ ಸಹ ಯಂತ್ರ ತನ್ನ ಕೃತಕ ಬುದ್ಧಿವಂತಿಕೆಯಿಂದ ಪ್ರಶ್ನೆಯನ್ನು ವಿಶ್ಲೇಷಿಸಿ ತನ್ನಲ್ಲಿರುವ 15 ಲಕ್ಷ ಉತ್ತರಗಳೊಂದಿಗೆ ತಾಳೆ ಮಾಡಿ ಉತ್ತರ ನೀಡುತ್ತದೆ. ಈ ಅಧಿಕಾರಿ ತಿಳಿಸಿದಂತೆ ನಾವು Mount Everestನ ಎತ್ತರ, 7X20 ಎಷ್ಟು, ಒಂದು ಮೈಲಿಗೆ ಎಷ್ಟು ಇಂಚುಗಳು, ಇತ್ಯಾದಿ ಪ್ರಶ್ನೆಗಳಿಗೆ ತತ್‌ಕ್ಷಣ ಉತ್ತರ ಪಡೆಯಬಹುದಾಗಿದೆ. ಇದು ಈಗಾಗಲೇ ಕಲೆಹಾಕಿರುವ ಉತ್ತರಗಳ ಮಿತಿಯಲ್ಲಿ ಕಾರ್ಯ ನಿರ್ವಹಿಸುವುದರಿಂದ ಕ್ಲಿಷ್ಟ ಹಾಗೂ ನೂತನ ಪ್ರಶ್ನೆಗಳಿಗೆ (ಗ್ರಂಥಪಾಲಕರು ಮತ್ತು ತಜ್ಞರ ಪರಾಮರ್ಶನ ಸೇವೆಗಳಲ್ಲಿ ಪಡೆಯುವಂತೆ) ಉತ್ತರಿಸಲಾಗದು. ಹಾಗಾಗಿ ಇದರಲ್ಲಿ ಮೇಲೆ ತಿಳಿಸಿದ ಕುವೆಂಪು ಯಾರು, ಹಂಪೆ ಎಲ್ಲಿದೆ, ಕಾವೇರಿ ನದಿಯ ಉದ್ದ ಎಷ್ಟು, ಕನ್ನಂಬಾಡಿ ಕಟ್ಟೆಯ ಎತ್ತರ ಎಷ್ಟು, ಲೈಬ್ರರಿ ಆಫ್ ಕಾಂಗ್ರೆಸ್‌ನಲ್ಲಿ ಕನ್ನಡ ಪುಸ್ತಕಗಳೆಷ್ಟು, ಇತ್ಯಾದಿ ಪ್ರಶ್ನೆಗಳಿಗೆ ಉತ್ತರವಿಲ್ಲ. ಪ್ರಶ್ನೆಯಲ್ಲಿರುವ ಪದಗಳನ್ನು ತನ್ನ ಪಠ್ಯ ಕೋಶದ ಸೂಚಿಗೆ ಹೋಲಿಸಿ ಪಠ್ಯದ ಆ ಭಾಗಕ್ಕೆ ಕೊಂಡೊಯ್ಯುವುದನ್ನು ಒಂದು ಸಮರ್ಥ ಪರಾಮರ್ಶನ ಸೇವೆ ಅಥವ ಪ್ರಶ್ನೋತ್ತರ ಸೇವೆ ಎನ್ನುವುದು ಕಷ್ಟ. Mount Everest ಎಂದು ಅಚ್ಚೊತ್ತಿದರೆ 126 ತಾಣಗಳ ವಿಳಾಸ (URL) ಗಳನ್ನು ತೋರಿಸುತ್ತದೆ. ಪ್ರಶ್ನೆಗೆ height ಎಂದು ಸೇರಿಸಿದಾಗ 31 ತಾಣಗಳ ವಿಳಾಸ ತೋರಿಸಿ, ಅವುಗಳ ಪಠ್ಯದಿಂದ ಆಯ್ದ Mount Everestನ ಎತ್ತರದ ಸಂಖ್ಯೆಯಿರುವ ವಾಕ್ಯವಿರುತ್ತದೆ. ಆದರೆ width, colour ಅಥವಾ ಇನ್ನೇನಾದರೂ ಸೇರಿಸಿದರೆ ಉತ್ತರವಿಲ್ಲ ಅಥವ ತಪ್ಪು ತಾಣಗಳು ದೊರೆಯುತ್ತವೆ. ವಿಚಿತ್ರದ ಸಂಗತಿಯೆಂದರೆ ಕೆಲವು ದಿನಗಳ ನಂತರ Mount Everest ಅಗಲ, ಬಣ್ಣ ಇತ್ಯಾದಿಗಳಿಗೂ ಉತ್ತರವಿರುವ ವಾಕ್ಯಗಳನ್ನು ದೊರಕಿಸಿತು. ಇದು ಇಂಟರ್‌ನೆಟ್‌ಗೆ ಸತತವಾಗಿ ಮಾಹಿತಿ ಸೇರ್ಪಡೆಯಾಗುತ್ತಿರುವುದರ ಮತ್ತು ಕ್ಷಣಕ್ಷಣಕ್ಕೂ ಸೂಚಿಯ ಪರಿಷ್ಕರಣೆ ನಡೆಯುತ್ತಿರುವುದರ ಫಲ. ಹಾಗೆಯೇ ಲೈಬ್ರರಿ ಆಫ್ ಕಾಂಗ್ರೆಸ್ ಜೊತೆಗೆ Kannada books ಎಂದು ಸೇರಿಸಿದರೆ ಆ ಗ್ರಂಥಾಲಯದಲ್ಲಿರುವ ಒಟ್ಟು ಪುಸ್ತಕಗಳ ಸಂಖ್ಯೆಗೆ ಕೊಂಡೊಯ್ಯುತ್ತದೆ ಏಕೆಂದರೆ ಅದರ ಸೂಚಿಯಲ್ಲಿ ಕನ್ನಡ ಪುಸ್ತಕಗಳ ಬಗೆಗೆ ಮಾಹಿತಿಯಿಲ್ಲ. ಅಂತೆಯೇ ಭಾರತದ ರಾಷ್ಟ್ರೀಯ ಗ್ರಂಥಾಲಯದ ಪುಸ್ತಕಗಳ ಸಂಖ್ಯೆಯೂ ಇಲ್ಲ. ಇನ್ನು 7X20 ರ ಗುಣಾಕಾರ, ಒಂದು ಮೈಲಿಗೆ ಎಷ್ಟು ಇಂಚು ಇತ್ಯಾದಿಗೆ ಕ್ಯಾಲ್ಕ್ಯುಲೇಟರ್ ಬಿಟ್ಟು ಇಂಟರ್‌ನೆಟ್ ಬಳಸುವುದು ಅಷ್ಟು ಸಮಂಜಸವಲ್ಲ. ಮೈಕ್ರೋಸಾಫ್ಟ್ ನಂತಹ ಹಲವಾರು ಪ್ರತಿಷ್ಠಿತ ಕಂಪನಿಗಳು ಕಂಪ್ಯೂಟರ್ ಮತ್ತು ಇಂಟರ್‌ನೆಟ್ ಬಗ್ಗೆ ಈ ರೀತಿ ಕಡ್ಡಿಯನ್ನು ಗುಡ್ಡ ಮಾಡಿ ನಿರಂತರವಾಗಿ ಗ್ರಾಹಕರನ್ನು ಮರುಳುಗೊಳಿಸುವುದು ಸರ್ವೇ ಸಾಮಾನ್ಯ.

ಸಂತಸದ ಸಂಗತಿಯೆಂದರೆ ಲೈಬ್ರರಿ ಆಫ್ ಕಾಂಗ್ರೆಸ್‌ನಲ್ಲಿ ಕನ್ನಡ ಪುಸ್ತಕಗಳೆಷ್ಟು, ಕಾವೇರಿ ನದಿಯ ಉದ್ದ ಮತ್ತು ಕನ್ನಂಬಾಡಿಯ ಎತ್ತರ ಎಷ್ಟು ಎಂದು ತಿಳಿಸದಿದ್ದರೂ answers.com ಕುವೆಂಪು ಅವರ ಬಗೆಗಿನ ನಿಖರ ಸಂಕ್ಷಿಪ್ತ ಮಾಹಿತಿ (ಕನ್ನಡದಲ್ಲಿ ವಿಶ್ವಮಾನವ ಸಂದೇಶದ ಒಂದು ಸಾಲೂ ಸೇರಿದಂತೆ), ಅವರ ಮುಖ್ಯ ಕೃತಿಗಳು, ಗಳಿಸಿದ ಪ್ರಶಸ್ತಿಗಳಲ್ಲದೆ ಅವರ ಬಗ್ಗೆ ಹೆಚ್ಚು ವಿವರಗಳಿಗೆ ಸಂದರ್ಶಿಸಬೇಕಾದ ತಾಣಗಳ ಪಟ್ಟಿಯನ್ನೂ ಒದಗಿಸುತ್ತದೆ. ಹಾಗೆಯೇ 5 ಚಿತ್ರಗಳನ್ನೊಳಗೊಂಡ ಹಂಪಿಯ ವಿವರವನ್ನೂ ನೀಡುತ್ತದೆ. ಮತ್ತೂ ಸಂತೋಷದ ವಿಷಯವೆಂದರೆ Ask Jeeves (http://www.ask.com) ಕರಾರುವಾಕ್ಕಾಗಿ ಕಾವೇರಿ ನದಿಯ ಉದ್ದ ಮತ್ತು ಕನ್ನಂಬಾಡಿ ಕಟ್ಟೆಯ ಎತ್ತರವನ್ನೂ ತಿಳಿಸುವುದಲ್ಲದೆ ಕುವೆಂಪು ಮತ್ತು ಹಂಪೆಯ ಬಗೆಗಿನ ವಿವರಗಳಿರುವ ತಾಣಗಳನ್ನು ತೋರಿಸುತ್ತದೆ. ಆದರೆ ಲೈಬ್ರರಿ ಆಫ್ ಕಾಂಗ್ರೆಸ್‌ನಲ್ಲಿರುವ ಕನ್ನಡ ಪುಸ್ತಕಗಳೆಷ್ಟು ಎಂಬ ಪ್ರಶ್ನೆಗೆ ಭಾರತದ ರಾಷ್ಟ್ರೀಯ ಗ್ರಂಥಾಲದಲ್ಲಿರುವ ಕನ್ನಡ ಪುಸ್ತಕಗಳ ಸಂಖ್ಯೆ ತಿಳಿಸಿ ಇತರ ಸಂಬಂಧಪಟ್ಟ ತಾಣಗಳ ವಿಳಾಸ ತೋರಿಸುತ್ತದೆ. ಇದು ಯಂತ್ರದ ಕೃತಕ ಬುದ್ಧಿಯು ಪ್ರಶ್ನೆಯಲ್ಲಿನ ಪದಗಳನ್ನು ಸೂಚಿ ಪದಗಳೊಂದಿಗೆ ಹೊಂದಿಸುವಾಗ ನಡೆಯುವ ತಪ್ಪು ಹೊಂದಾಣಿಕೆಯಿಂದಾಗುವ (wrong match) ಪ್ರಮಾದಗಳಲ್ಲೊಂದು. ಇದಲ್ಲದೆ ಮಕ್ಕಳಿಗೆ Ask Jeeves Kids (http://www.ajkids.com) ಎಂಬ ಪ್ರಶ್ನೋತ್ತರಗಳ ಆಗರ (archive) ಕೂಡ ಇದೆ. Search Rover (http://searchrover.net) ತನ್ನ 'findit' ವಿಭಾಗಲ್ಲಿ ಇದೇ ತೆರನಾದ ಸೇವೆಯನ್ನು ಕೊಡುವುದಲ್ಲದೆ ಹವಾಮಾನ, ಪ್ರವಾಸ, ಪದಗಳ ಅರ್ಥ ಇತ್ಯಾದಿ ವಿಭಾಗಗಳಲ್ಲಿಯೂ ಸೇವೆ ದೊರಕಿಸುತ್ತದೆ.

ಯಾವ ಶೋಧ ಯಂತ್ರವೂ ಎಲ್ಲ ಪ್ರಶ್ನೆಗಳನ್ನೂ ಉತ್ತರಿಸಲಾಗುವುದಿಲ್ಲವಾದರೂ ಗ್ರಂಥಪಾಲಕರು ಮತ್ತು ತಜ್ಞರಿಂದ ಪಡೆಯುವ ಪರಾಮರ್ಶನ ಸೇವೆಯ ಅವಶ್ಯಕತೆಯನ್ನು ತಗ್ಗಿಸಿ ಅದಕ್ಕೆ ಪೂರಕವಾಗಿ ಹಲವಾರು ಚುಟುಕು, ಸಾಮಾನ್ಯ ಮತ್ತು ಪುನರಾವರ್ತಿತ ಪ್ರಶ್ನೆಗಳಿಗೆ ಉತ್ತರ ಪಡೆಯಲು ಈ ಮಾರ್ಗವೇ ಉಚಿತ ಎಂಬುದು ನಿರ್ವಿವಾದ. ವೆಬ್‌ನಲ್ಲಿ ಲಭ್ಯವಿರುವ ಮಾಹಿತಿಯೇ ಇವುಗಳ ಬೆನ್ನೆಲುಬಾದ್ದರಿಂದ ಇಂಟರ್‌ನೆಟ್‌ನಲ್ಲಿ ನಮಗೆ ಬೇಕಾದ ಮಾಹಿತಿಯನ್ನು ಸಮೃದ್ಧಗೊಳಿಸಿ, ಕಾಲಕಾಲಕ್ಕೆ ಪರಿಷ್ಕರಿಸಿ, ಕ್ರಮಬದ್ಧ ತಾಣವಿಳಾಸ, metadata ಮತ್ತು ಸೂಚಿ ಪದಗಳೊಂದಿಗೆ ಜನಪ್ರಿಯ ಶೋಧಯಂತ್ರಗಳಿಗೆ ರವಾನಿಸಬೇಕು. ಶೋಧ ಯಂತ್ರದ ಚಾಕಚಕ್ಯತೆ ಏನೇ ಇರಲಿ ನಾವು ಕನ್ನಡ ಮತ್ತು ಕರ್ನಾಟಕಕ್ಕೆ ಸಂಬಂಧಿಸಿದ ಸಂಪೂರ್ಣ ಮಾಹಿತಿ, ಅಂಕಿ ಅಂಶಗಳನ್ನು ಜನಪ್ರಿಯ ಸಾರ್ವಜನಿಕ ತಾಣಗಳಲ್ಲಿ ಮತ್ತು ಕನ್ನಡ ವಿಕಿಪೀಡಿಯ (ಮುಕ್ತ ವಿಶ್ವಕೋಶ), ವಿಕ್ಷನರಿ (ಮುಕ್ತ ಶಬ್ಧಕೋಶ) ಮುಂತಾದವುಗಳಲ್ಲಿ ತುಂಬದಿದ್ದರೆ ಶೋಧ ಯಂತ್ರಗಳಿಗೆ ಮಾಹಿತಿ, ಅಂಕಿ ಅಂಶಗಳಾದರೂ ದೊರೆಯುವುದೆಲ್ಲಿಂದ?. ಅಂತರರಾಷ್ಟ್ರೀಯ ಮಟ್ಟದಲ್ಲಿ ವಿಜ್ಞಾನಿಗಳು ಲಕ್ಷಾಂತರ ಲೇಖನಗಳನ್ನು ಮಧ್ಯವರ್ತಿಗಳ ಕಪಿಮುಷ್ಠಿ ಹಾಗೂ ಕಾಪಿರೈಟ್‌ನಿಂದ ಬಿಡುಗಡೆಗೊಳಿಸಲು ಮುಕ್ತ ಪತ್ರಾಗಾರಗಳ (open archive) (http://www.openarchives.org, http://www.eprints.org) ವ್ಯವಸ್ಥೆಯತ್ತ ಸಾಗಿರುವಾಗ ನಾವು ಸ್ಥಳೀಯವಾಗಿ ನಮ್ಮ ವಿಶ್ವಕೋಶ, ನಿಘಂಟು ಇತ್ಯಾದಿಗಳನ್ನು ಕಾಪಿರೈಟ್‌ನಿಂದ ಮುಕ್ತಗೊಳಿಸದೆ ಮಧ್ಯವರ್ತಿಗಳ ಪಾಲಾಗಿಸಿದರೆ ಹೇಗೆ?. ಮುಂಬರುವ ದಿನಗಳಲ್ಲಿ ಹೆಚ್ಚಿನ ಚತುರತೆಯನ್ನು ಬಳಸಿ ಇನ್ನೂ ಕರಾರುವಾಕ್ಕಾದ ಉತ್ತರಗಳನ್ನು ಸ್ವಯಂಚಾಲಿತ ಇಂಟ್‌ರ್‌ನೆಟ್ ಶೋಧ ಯಂತ್ರಗಳಿಂದ ನಿರೀಕ್ಷಿಸಬಹುದು. ಅಷ್ಟೇ ಅಲ್ಲದೆ ಪ್ರಶ್ನೆಗಳಿಗೆ ಕನ್ನಡದಲ್ಲೇ ಉತ್ತರಗಳನ್ನು ನೀಡುವ ಸಾದ್ಯತೆ ಇದೆ.

---

* ನೆಟ್‌ನಲ್ಲಿ ಸ್ವಯಂಚಾಲಿತ ಉತ್ತರ, *ಕನ್ನಡ ಪ್ರಭ*, ಜೂನ್ ೩, ೨೦೦೫, ಪು. ೬.

## ಲೇಕಖರ ವಿವರ



ಡಾ. ಎಂ ಎಸ್ ಶ್ರೀಧರ್‌ರವರು ಗಣಿತ ಹಾಗೂ ಬಿಸಿನೆಸ್ ಮ್ಯಾನೇಜ್‌ಮೆಂಟ್ ಎರಡೂ ವಿಷಯಗಳಲ್ಲಿ ಸ್ನಾತಕೋತ್ತರ ಪದವೀಧರರಾಗಿದ್ದು, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನದಲ್ಲಿ ಡಾಕ್ಟರೇಟ್ ಪಡೆದಿದ್ದಾರೆ. ಅವರು ಕಳೆದ ೩೭ ವರ್ಷಗಳಿಂದ ಗ್ರಂಥಾಲಯ ಕ್ಷೇತ್ರದಲ್ಲಿದ್ದು, ೧೯೭೮ ರಿಂದ ಇಸ್ರೋ ಉಪಗ್ರಹ ಕೇಂದ್ರದ ಗ್ರಂಥಾಲಯ ಮತ್ತು ಪ್ರಲೇಖನ ವಿಭಾಗದ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇದಕ್ಕೂ ಮುನ್ನ ಎನ್ ಎ ಎಲ್, ಐ ಐ ಎಂ (ಬೆಂಗಳೂರು) ಹಾಗೂ ಮೈಸೂರು ವಿಶ್ವ ವಿದ್ಯಾಲಯಗಳ ಗ್ರಂಥಾಲಯಗಳಲ್ಲಿ ಕಾರ್ಯ ನಿರ್ವಹಿಸಿದ ಅನುಭವವಿದೆ.

ಡಾ. ಶ್ರೀಧರ್ ಅವರು ೪ ಪುಸ್ತಕಗಳು ಮತ್ತು ೮೮ ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಿದ್ದಾರೆ, ಹಾಗೂ ವಿವಿಧ ಪುಸ್ತಕಗಳಿಗಾಗಿ ೫ ಪಠ್ಯಗಳನ್ನೂ ಬರೆದಿದ್ದಾರೆ. ಇವರು ಮುಕ್ತ ವಿಶ್ವವಿದ್ಯಾನಿಲಯಗಳ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಪದವಿ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ ೧೯ ಪಠ್ಯ ಸಾಮಾಗ್ರಿಯನ್ನು ರಚಿಸಿದ್ದಾರೆ. ಇದಲ್ಲದೆ ಸುಮಾರು ೪೫ ಲೇಖನ/ ಪ್ರವಚನಗಳನ್ನು ವಿವಿಧ ಸಮ್ಮೇಳನ / ವಿಚಾರ ಸಂಕಿರಣಗಳಲ್ಲಿ ಮಂಡಿಸಿದ್ದಾರೆ.